ಶ್ರೀಮತಿ ಲೀಲಾದೇವಿ .ಆರ್. ಪ್ರಸಾದ್ :- ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಪ್ರವಾಸಿಗರ ಸೌಲಭ್ಯಗಳಲ್ಲಿ ರಸ್ತೆ ಮುಖ್ಯವಾದುದು. ಆ ಕುರಿತು ಮುಂದೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತೇವೆ.

ಕೊಡಗಿನಲ್ಲಿ ಸ್ವಂತ ಉಪಯೋಗಕ್ಕೆ ಮರ ಕಡಿಯುವುದು

78 (510) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಕೊಡಗಿನ ಸ್ವಂತ ಉಪಯೋಗಕ್ಕೆ ಮರವನ್ನು ಕಡಿಯಲು ಕೆಲವೇ ಟಿನ್ಬೂರ್‌ಗಳಲ್ಲಿ ಅನುಮತಿ ಕೊಡುತ್ತಿದ್ದೀರಿ, ಇದಕ್ಕೆ ಕಾರಣವೇನು?

ಆ) ಸ್ವಂತ ಉಪಯೋಗಿಸುವ ಮರಕ್ಕೆ ಸ್ವಂತ ಜಾಗದಿಂದ ಮರವನ್ನುಕಡಿಯಲು ಅನುಮತಿ ಕೊಡುತ್ತೀರಾ?

ಶ್ರೀ ಜೆ. ಹಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಕೊಡಗಿನಲ್ಲಿ ಎರಡು ರೀತಿಯ ಭೂ ನಿಬಂಧನೆಗಳಿವೆ. ಅಂದರೆ ರೆಡೀಂ ಮತ್ತು ಅನ್ ರೆಡೀಮ್ಡ್. ರೆಡೀಂ ಸ್ಥಳಗಳಲ್ಲಿ ವಾಸ್ತವಿಕ ಉಪಯೋಗಕ್ಕೆ ಜಿಲ್ಲಾಧಿಕಾರಿಗಳ ಅಭಿಪ್ರಾಯವನ್ನು ಪಡೆದುಕೊಂಡು ಭೂ ಮಾಲೀಕರಿಗೆ ನಿಗದಿತ ಮಿತಿಯಲ್ಲಿ ಮರಗಳ ಕಡಿತಲೆಗೆ ವಿಭಾಗ ಮಟ್ಟದಲ್ಲಿ ನಿಯಮದ ಎಲ್ಲೆಯಲ್ಲಿ ಅನುಮತಿಸಲಾಗುತ್ತಿದೆ. ಇದೇ ರೀತಿಯಲ್ಲಿ ಅನ್‌ರೆಡೀಮ್ಡ್ ಸ್ಥಳಗಳಲ್ಲಿ ಜಮ್ಮ ಮತ್ತು ಬಾಣೆ ಸ್ಥಳಗಳಿಗೆ ಕರ್ನಾಟಕ ಭೂಕಂದಾಯ ಅಧಿ ನಿಯಮ 1964 ರ ಅವಿಧಿ 79 (2) ರಲ್ಲಿ ಸಾಂಪ್ರದಾಯಿಕ ಅಥವಾ ಆದೇಶಗಳ ಮೂಲಕದ ವಿಶಿಷ್ಟ ಹಕ್ಕುಗಳನ್ನು (ಪ್ರಿವಿಲೆಜ್) ಮುಂದುವರಿಸಿರುವುದರಿಂದ ಸ್ವಂತ ಉಪಯೋಗದ ಬಗ್ಗೆ ನಿಯಮಾನುಸಾರ ಅನುಮತಿ ನೀಡಲಾಗುತ್ತಿದೆ.

ಆ) ಹೌದು

ಶ್ರೀ ಎಂ. ಸಿ. ನಾಣಯ್ಯ (ಮುಖ್ಯ ಮಂತ್ರಿಗಳ ಪರವಾಗಿ) :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಉತ್ತರಗಳನ್ನು ಒದಗಿಸಲಾಗಿದೆ. ಅವರು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಮೊದಲು ಅವರು ಕೇಳಿದಂತೆ ಸ್ವಂತ ಉಪಯೋಗಕ್ಕೆ ಮರಗಳನ್ನು ಕಡಿಯಲಿ ಕೆಲವೇ ಟನ್ಬೂರ್‌ಗಳಲ್ಲಿ ಅನುಮತಿ ಕೊಡುತ್ತಿದ್ದೀರಿ ಎಂದು ಕೇಳಿದ್ದಾರೆ. ಅಲ್ಲಿ 32 ಟಿನ್ಬೂರ್‌ಗಳು ಇದ್ದಾವೆ. ಈ 32 ಟಿನ್ಬೂರ್‌ಗಳಲ್ಲಿ ಕೇವಲ 16 ಟಿನ್ಬೂರ್‌ಗಳಿಗೆ ಸಂಬಂಧಪಟ್ಟ ಹಾಗೆ ಮಾತ್ರ ಅನುಮತಿಯನ್ನು ಕೊಡುತ್ತಿದ್ದಾರೆ. ಬಾಕಿ ಇರತಕ್ಕಂಥ 16 ಟಿನ್ಬೂರ್‌ಗಳಿಗೂ ಕೂಡ ಅನುಮತಿಯನ್ನು ಕೊಡಲು ಸರಕಾರದ ಮಟ್ಟದಲ್ಲಿ ಆ ಬಗ್ಗೆ ಪರಿಶೀಲನೆ ನಡೆಸಿ ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ :- ಅದಕ್ಕೆ ಕಾಲಮಿತಿಯನ್ನೇನಾದರೂ ವಿಧಿಸುತ್ತೀರೋ ಎಂದು ಕೇಳಬಯಸುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :- ಶೀಘ್ರದಲ್ಲಿಯೇ ಈ ಕುರಿತು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ :- ಮಾನ್ಯ ಅಧ್ಯಕ್ಷರೇ, ತಾವುಗಳು ಅನುಮತಿಸಿದರೆ ಒಂದು ಪ್ರಶ್ನೆಯನ್ನು ಈ ಕುರಿತು ಕೇಳಲಪೇಕ್ಷಿಸುತ್ತೇನೆ. ಮಾನ್ಯ ಸಚಿವರು ಸ್ವಂತ ಉಪಯೋಗಕ್ಕೆ ಮರಕಡಿಯಲು ಅನುಮತಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ನಾಣಯ್ಯನವರು ಕೂಡ ಹಿಂದೆ ಅರಣ್ಯ ಮಂತ್ರಿಯಾಗಿದ್ದರವರು, ಈಗಲೂ ಅದರ ಜಬಾವ್ದಾರಿಕೆಯನ್ನು ತೆಗೆದುಕೊಂಡಿದ್ದೀರಿ. ಕೊಡಗಿನಲ್ಲಿ ಎರಡು ವಿಧಾನಗಳು ಇವೆ ಎಂದು ಹೇಳಿದ್ದೀರಿ. ಈ ಎರಡು ವಿಧಾನಗಳನ್ನು ಬಗೆಹರಿಸತಕ್ಕಂಥ ಪ್ರಾಮಾಣಿಕ ಯತ್ನವು ಇದುವರೆಗೂ ಆಗಲೇ ಇಲ್ಲ. ಕೊಡಗಿನಲ್ಲಿ ಮರಗಳನ್ನು ಕಡಿಯಬೇಕಾದರೆ ತುಂಬಾ ತೊಂದರೆ ಇರುವುದು ತಮಗೂ ಗೊತ್ತಿದೆ. ಕಾಫೀ ತೋಟಗಳನ್ನು ಮಾಡುವಲ್ಲಿ ಕೂಡ ಸಾಕಷ್ಟು ತೊಂದರೆಗಳನ್ನು ತಾವು ಅನುಭವಿಸುತ್ತಾ ಇದ್ದೇವೆ. ಎರಡನೇದಾಗಿ ಸ್ವಂತ ಉಪಯೋಗಕ್ಕೆ ಮರಕಡಿಯಲಿ ಅನುಮತಿ ಕೊಡುತ್ತೀರಾ ಎಂದುಕೇಳಿದ್ದಕ್ಕೆ ಹೌದು ಎಂದು ಹೇಳಿದ್ದೀರಿ. ಆದರೆ ಈ ಅನುಮತಿಯನ್ನು ಪಡೆದುಕೊಳ್ಳಲು ಎಷ್ಟು ಕಷ್ಟ ಇದೆ ಎಂಬುದನ್ನು ತಾವುಗಳೂ ಕೂಡ ತಿಳಿದುಕೊಂಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ನನ್ನ ಸ್ವಂತ ಉಪಯೋಗಕ್ಕಾಗಿ ಮರಕಡಿಯಲಿ ಒಬ್ಬ ಶಾಸಕನಾಗಿ ಎಲ್ಲಾ ತರದ ಪ್ರಯತ್ನಗಳನ್ನು ಮಾಡಿದ ನಂತರ 9 ತಿಂಗಳ ಅನಂತರ ನನಗೆ ಅನುಮತಿ ದೊರಕಿತು. ಅಂದರೆ ಕಾನೂನು ಎಷ್ಟು ಕಠಿಣವಾಗಿದೆ. ಮರಕಡಿಯಲು ನೀವು ಅನುಮತಿ ಕೊಡುತ್ತೇವೆ ಎಂದು ತೀರ್ಮಾನ ಮಾಡಿದ ಮೇಲೆ ಕಾನೂನನ್ನು ಎಷ್ಟು ಕಠಿಣವಾಗಿ ಮಾಡಿದ ಕಾರಣಕ್ಕಾಗಿ ಸ್ವಲ್ಪ ಮಟ್ಟಿಗೆ ಮರಗಳ ಕಳ್ಳತನವಾಗುತ್ತದೆ. ರಾತ್ರಿಯಲ್ಲಿ ಹೇಳಿದರೆ ಬೆಳಗಾಗುವುದರೊಳಗೆ ನಮ್ಮ ಮನೆಯ ಹತ್ತಿರ ಇಟ್ಟು ಬಿಡುವ ಜನರು ನಮ್ಮಲ್ಲಿ ಇದ್ದಾರೆ. ಇದು ಕೂಡ ತಮಗೆ ಗೊತ್ತಿರುವ ವಿಚಾರ. ಅಂದ ಮೇಲೆ ಈ ಕಾನೂನನ್ನು ಸಡಿಲಗೊಳಿಸಿ, ಕಾನುನು ರೀತ್ಯಾ ಮರಕಡಿಯಲು ಅನುಮತಿ ಕೊಡುತ್ತೇವೆ ಎಂದು ಇದೆ, ಜಾಗ ಅವನದ್ದು, ಮರ ಅವನದ್ದು, ಇಷ್ಟು ಮಾತ್ರ ಅವನಿಗೆ ಬೇಕಾಗಿರುವುದು, ಆದ್ದರಿಂದ ಮರಕಡಿಯಲಿ ಕೊಡುವ ಕಾನೂನನ್ನು ಸುಲಭ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಸಭಾಧ್ಯಕ್ಷರೇ, ಕೊಡಗಿನಲ್ಲಿ ಒಂದು ವಿಶೇಷವಾಗಿರತಕ್ಕಂಥ ಟೆನ್ಯೂರ್ ಇದೆ. ಬಹುಶ: ಇತರ ಜಿಲ್ಲೆಗಳಲ್ಲಿ ಈ ಟೆನ್ಯೂರ್ ಇಲ್ಲ. ಒಂದು ಕಡೆ ರೆಡೀಮ್ಡ್ ಜಾಗ, ಇನ್ನೊಂದು ಕಡೆ ಅನ್‌ರೆಡೀಮ್ಡ್ ಜಾಗ ಎಂದು ಇದೆ. ರೆಡೀಮ್ಡ್ ಜಾಗ ಅಂದರೆ ಮಾಲಕ ಕಟ್ಟಕ್ಕಂಥಾದ್ದು ಎಂದು ಅರ್ಥ. ನಮ್ಮಲ್ಲಿ ವಿಶಿಷ್ಟವಾಗಿರತಕ್ಕಂಥ ಕೆಲವು ಪ್ರಿವಿಲೇಜಸ್ ಇವೆ. ಜಮ್ಮ ಮತ್ತು ಜೋಡಿ ಎಂದು ಹೇಳತಕ್ಕಂಥದ್ದು ಇದೆ. ನೀವು ಸ್ವಂತ ಉಪಯೋಗಕ್ಕೆ ಮರಗಳನ್ನು ಕಡಿಯತಕ್ಕಂಥ ವಿಚಾರದಲ್ಲಿ ಕೇಳಿದ್ದೀರಿ. ಬಹುಶ: ತಾವುಗಳು ಬಹಳ ಹಿಂದಿನ ತಮ್ಮ ಅನುಭವವನ್ನು ಹೇಳಿರಬಹುದು. ಈಗ ಕೊಡಗು ಜಿಲ್ಲೆಯಲ್ಲಿ ಮರಗಳನ್ನು ಕಡಿಯಲಿ ಇರತಕ್ಕಂಥಾದ್ದಕ್ಕೆ 100 ಘನ ಅಡಿ ಮರಗಳನ್ನು ಸ್ವಂತ ಉಪಯೋಗಕ್ಕೆ ಮತ್ತು ಐದು ಟನ್‌ಗಳಷ್ಟು ಸೌದೆ ಅಂತ ಇದೆ. ಇದನ್ನು ಅರ್ಜಿಯನ್ನು ಕೊಟ್ಟು ಒಂದು ತಿಂಗಳ ಒಳಗಡೆ ವಿಲೇವಾರಿ ಮಾಡಲು ಇರತಕ್ಕಂಥ ಅಧಿಕಾರವನ್ನು ನಾನು ಜಿಲ್ಲಾ ಸಚಿವನಾಗಿ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಕೊಟ್ಟಿದ್ದು ಈ ಕೆಲಸವನ್ನು ಈಗ ಮಾಡುತ್ತಾ ಇದ್ದಾರೆ. ಬಹುಶ: ಇದರಲ್ಲಿ ವಿಳಂಬ ಈ ವಿಷಯಕ್ಕೆ ಇಲ್ಲ. ಎರಡನೇದಾಗಿ ಕಾಫಿತೋಟಗಳಲ್ಲಿ ಮರದ ನೆರಳನ್ನು ತೆಗೆಯಲು ಇರತಕ್ಕಂಥಾದ್ದಕ್ಕೆ ಅನಾವಶ್ಯಕವಾಗಿ ಇರತಕ್ಕಂಥ ಮರಗಳನ್ನು ತೆಗೆಯಲು ಇರತಕ್ಕಂಥಾದ್ದಕ್ಕೆ ಸಿನರೇಜ್‌ಗಳನ್ನು ಕಟ್ಟಿ ಮರಗಳನ್ನು ತೆಗೆದುಕೊಂಡು ಹೋಗಲು ಇರತಕ್ಕಂಥಾದ್ದಕ್ಕೆ ಇವೊತ್ತೂ ಅವಕಾಶವಿದೆ. ಇದಕ್ಕೆ ಸಂಬಂಧಪಟ್ಟಿರತಕ್ಕಂಥ ನಿಯಮಗಳನ್ನು ಸರಳೀಕರಣ ಮಾಡಲು

ಇರತಕ್ಕಂಥಾದ್ದಕ್ಕೆ ನಾನೇ ಅಧಿಕಾರಿಗಳ ಜೊತೆಗೆ ಕುಳಿತು ಚರ್ಚೆ ಮಾಡಿ, ಒಂದು ಸರಳೀಕರಣ ವಿಧಾನವನ್ನು ಕೂಡ ಈಗಾಗಲೇ ರೆಫರ್ ಮಾಡಿದ್ದಾರೆ. ಬಹುಶ: ಸರಕಾರದ ಆಜ್ಞೆಯನ್ನು ಹೊರಡಿಸಲು ಇರತಕ್ಕಂಥದ್ದಕ್ಕೆ ಕ್ರಮವನ್ನು ಕೈಗೊಳ್ಳುತ್ತಾ ಇದ್ದೇವೆ. ಕೆಲವು ಸಂದರ್ಭಗಳಲ್ಲಿ ಕಾಫಿ ತೋಟದಲ್ಲಿ ಮರದ ನೆರಳು ಹೆಚ್ಚಿಗೆ ಆದಾಗ, ಬೇಡವಾದ ಮರಗಳನ್ನು ತೆಗೆಯುವುದಕ್ಕೆ, ಮತ್ತು ಇತರ ಭಾಗಗಳಲ್ಲಿ ಬೇಕಾಗುವ ಮರಗಳನ್ನು ಅವರೇ ಮಾಡುತ್ತಾರೆ. ಕಾಫಿ ತೋಟಕ್ಕೆ ನೆರಳು ಮರ ಬೇಕೇ ಬೇಕು. ಅನಾವಶ್ಯಕವಾಗಿ ಇರತಕ್ಕಂಥ ನೆರಳು ಮರಗಳನ್ನು ಸೀನರೇಜ್ ಕಟ್ಟಿಕೊಳ್ಳತಕ್ಕಂಥಾದ್ದು ಇದೆ. ಈ ವಿಚಾರದಲ್ಲಿ ಇರುವ ನಿಯಮಗಳಲ್ಲಿ ಸ್ವಲ್ಪಮಟ್ಟಿಗೆ ಸರಳೀಕರಣವಾಗಬೇಕಾಗಿರುವುದೂ ಕೂಡ ಸರಕಾರದ ಗಮನಕ್ಕೆ ಬಂದಿದೆ. ಈ ಕಾರ್ಯಕ್ರಮವನ್ನು ಈಗಾಗಲೇ ಹಮ್ಮಿಕೊಂಡಿದ್ದೇವೆ. ಇನ್ನು ಒಂದು ತಿಂಗಳ ಒಳಗಡೆ ಈ ಸರಳೀಕರಣ ವಿಧಾನವನ್ನು ಕಾರ್ಯರೂಪಕ್ಕೆ ತರಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಅರಗಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೇ, ನಾವೆಲ್ಲರೂ ಮಲೆನಾಡಿನವರು. ಕಾಡಿನ ಮಧ್ಯದಲ್ಲಿಯೇ ನಮ್ಮ ಮನೆಗಳು ಇದ್ದಾವೆ. ನಮ್ಮ ಕಾಂಪೌಂಡ್‌ನ ಒಳಗಡೆ, ನಮ್ಮ ಜಮೀನಿನ ಒಳಗಡೆ ಇರತಕ್ಕಂಥ ಮರಗಳನ್ನು ಕಡಿಯಲು ಅನುಮತಿ ಪಡೆದುಕೊಳ್ಳಲು ಬೇಕಾಗುವ ದಾಖಲಾತಿಗಳನ್ನು ಒದಗಿಸಿಕೊಡಲು ನಮ್ಮ ಹಣೆಬರಹದಿಂದ ಸಾಧ್ಯವಿಲ್ಲ. ಇತ್ತೀಚೆಗೆ ಆ ಕಾನೂನನ್ನು ಬಹಳ ಕಠಿಣವಾಗಿ ಮಾಡಿದ್ದಾರೆ. ತಾವುಗಳು ಅರಣ್ಯಸಚಿವರಾಗಿ ತಮ್ಮ ಅಧಿಕಾರಿಗಳೊಡನೆ ಚರ್ಚಿಸಿ ನೋಡಿ. ನಮಗೆ 90 ಸಿ ಎಫ್ ಟಿ ನಾಟಾವನ್ನು ಉಪಯೋಗಿಸಿ ಕೊಳ್ಳಲು ಒಂದು ಅವಕಾಶವಿತ್ತು. ನಾವು ಅದನ್ನು ಉಪಯೋಗಿಸಲು ರೆವಿನ್ಯೂ ಇಲಾಖೆಯವರು, ಅರಣ್ಯ ಇಲಾಖೆಯವರು ಅತ್ಯಂತ ಹಿಂಸೆ ಕೊಟ್ಟು, ಅದಕ್ಕಿಂತ ಕಳ್ಳನಾಟಾ ಕಡಿಯುವುದು ಒಳ್ಳೆಯದು, ಯಾಕೆಂದರೆ ಅದರಲ್ಲಿ ಅರಣ್ಯ ಇಲಾಖೆಯವರು ನೋಡಿದರೆ ಸ್ವಲ್ಪ ಫೆನಾಲ್ಟಿ ಹಾಕುತ್ತಾರೆ, ಇಲ್ಲವಾದರೆ ಹೇಗೋ ನಡೆದು ಹೋಗುತ್ತದೆ ಎಂದು ಜನರು ಅದನ್ನೂ ಶುರು ಮಾಡಿದ್ದಾರೆ. ಇದು ಅರಣ್ಯ ಉಳಿಸುವ ದೃಷ್ಟಿಯಿಂದ ಅರಣ್ಯ ಇಲಾಖೆಗೆ ಒಳ್ಳೆಯದಲ್ಲ. ದಯಮಾಡಿ ಇದನ್ನು ಸರಳೀಕರಣ ಮಾಡುತ್ತೀರಾ? ಬಡವರಿಗೆ ಸಾಮಾನ್ಯ ಜನರಿಗೆ ಉಪಯೋಗವಾಗುವ ಒಂದುಕೆಲಸನ್ನು ತಾವು ಮಾಡಿದರೆ, ಕಾಡೂ ಉಳಿಯುತ್ತದೆ ಮತ್ತು ಜನರುಕಾಡನ್ನು ರಕ್ಷಣೆ ಮಾಡುತ್ತಾರೆ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಸಭಾಧ್ಯಕ್ಷರೇ, ಕೆಲವು ಸಂದರ್ಭಗಳಲ್ಲಿ ಸರಳೀಕರಣವಾದಷ್ಟೂ ಕಳ್ಳಸಾಗಾಣಿಕೆ ಆಗುತ್ತಿರುವುದನ್ನು ನಾವು ಅಲ್ಲಲ್ಲಿ ನೋಡಿದ್ದೇವೆ. ಕೆಲವು ಸಂದರ್ಭಗಳಲ್ಲಿ ಆಗುತ್ತಾ ಇದೆ. ಸ್ವಂತ ಉಪಯೋಗಕ್ಕೆ ಎಂದು ಹೇಳಿ, ಕಡೆಗೆ ವ್ಯಾಪಾರಿಗಳೇ ಅದನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ತಾವುಗಳು ಈ 100 ಘನ ಅಡಿ ಮರ, ನಿಮ್ಮ ಮನೆಯ ಹಿಂದು ಮುಂದು ಇದ್ದು ನಿಮ್ಮ ಸ್ವಂತ ಉಪಯೋಗಕ್ಕೆ ಬೇಕಾಗಿರತಕ್ಕಂಥಾದ್ದು, ಅಂಥ ಸಂದರ್ಭದಲ್ಲಿ ಅಧಿಕಾರಿಗಳಿಂದ ಸ್ವಲ್ಪ ತೊಂದರೆಯಾಗುತ್ತಿರತಕ್ಕಂಥ ವಿಚಾರವನ್ನು ಹೇಳಿದ್ದೀರಿ, ಅದು ಸರಕಾರದ ಗಮನಕ್ಕೆ ಬಂದಿದೆ. ಇದನ್ನು ಸರಳೀಕರಣ ಮಾಡಿ, ಈ ಜಮೀನು ಆ ಮಾಲೀಕನದ್ದು ಎಂದು ಅದರೆ ಅವರು ಕೊಡಬೇಕಾಗಿರತಕ್ಕಂಥ ಖಾತಾದ ಹಿನ್ನೆಲೆಯಲ್ಲಿ ಅರ್ಜಿ ಹಾಕಿ 30 ದಿನಗಳ ಒಳಗಡೆ ಅನುಮತಿಯನ್ನು ಕೊಡಲು ಇರತಕ್ಕಂಥಾದ್ದಕ್ಕೆ ಕ್ರಮವನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಹಾಗೆಯೇ ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಈ ಕುರಿತು ಆದೇಶವನ್ನು ಕೊಡಲು ಕ್ರಮವನ್ನು ಕೈಗೊಂಡಿದ್ದೇವೆ. ಇದು ಎಲ್ಲೆಲ್ಲಿ ಅನ್ವಯಿಸುತ್ತದೋ ಅಲ್ಲಿ ಮಾತ್ರ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನುಗಾರರಿಗೆ ವಸತಿ

82 (487) ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ಉತ್ತರ - ಕನ್ನಡ ಜಿಲ್ಲೆಯಲ್ಲಿ ಮೀನುಗಾರರಿಗೆ ವಸತಿ ನೀಡಿದ ಸಂಖ್ಯೆಯೆಷ್ಟು ; ಯಾವ ಯಾವ ಸ್ಥಳದಲ್ಲಿ ನೀಡಿದ್ದೀರಿ;

ಆ) ಇನ್ನು ಯಾವ - ಯಾವ ತಾಲ್ಲೂಕಿನಲ್ಲಿ ಪ್ರಸ್ತಾವನೆ ಬಂದಿದೆ ;

ಇ) ಅವರಿಗೆ ವಸತಿ ನೀಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) 1) 211 ಮನೆಗಳು

2) ಮಾಜಾಳಿ, ವೇವಜಾಗ - ಕಾರವಾರ ತಾಲ್ಲೂಕು, ಬೇಳಿಕೇರಿ - ಅಂಕೋಲ ತಾಲ್ಲೂಕು, ಅಳವೆದಂಡೆ - ಕೆಲಭಾಗ, ಅವನಾಶಿನಿ - ಕುಮಟಾ ತಾಲ್ಲೂಕು, ಹಳದೀಪುರ ಹಿರೇಮಠ - ಹೊನ್ನಾವರ ತಾಲ್ಲೂಕು, ಶಿರಾಲಿ - ಭಟ್ಕಳ ತಾಲ್ಲೂಕು.

ಆ) ಕಾರವಾರ, ಅಂಕೋಲ, ಕುಮಟಾ, ಹೊನ್ನವರ, ಭಟ್ಕಳ, ತಾಲ್ಲೂಕುಗಳಿಂದ ಹೆಚ್ಚಿನ ಮನೆಗಳಿಗೆ ಹಾಗೂ ಹಳಿಯಾಳ ತಾಲ್ಲೂಕಿನಿಂದ ಪ್ರಸ್ತಾವನೆಗಳು ಬಂದಿದೆ.

ಇ) ಕೇಂದ್ರ ಪುರಸ್ಕೃತ ಮೀನುಗಾರ ಕಲ್ಯಾಣ ಯೋಜನೆ ಅಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಬಂದ 586 ಅರ್ಜಿಗಳ ಪೈಕಿ 125 ಮನೆಗಳನ್ನು ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಲಾಗುವುದು. ಉಳಿದ ಮನೆಗಳ ನಿರ್ಮಾಣಕ್ಕೆ ಹುಡ್ಕೋ ಸಂಸ್ಥೆಯ ನೆರವನ್ನು ಪಡೆಯಲಿ ಪ್ರಯತ್ನಿಸಲಾಗುತ್ತಿದೆ.

ಶ್ರೀ ವಿಶ್ವೇಶ್ವರ ಹೆಗಡೆ :- ಮಾನ್ಯ ಅಧ್ಯಕ್ಷರೇ, ನಮ್ಮ ಸಚಿವರಿಗೆ ಮೀನುಗಾರಿಕೆಯ ಕುರಿತಂತೆ ಅಲ್ಲಿಯ ಜನರ ಸಮಸ್ಯೆಗಳ ಅರಿವು ಇದೆ. ಆದರೂ ಕೂಡ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಇಲ್ಲ ಎಂದು ಈ ಉತ್ತರದಿಂದ ಅನ್ನಿಸುತ್ತದೆ. ಹಾಗೆಯೇ ಮೀನುಗಾರಿಕಾ ಇಲಾಖಾ ಕಾರ್ಯಚಟುವಟಿಕೆಗಳನ್ನು ನೋಡಿದಾಗ ಅನ್ನಿಸುತ್ತದೆ. ಕಳೆದ ಮೂರು ವರ್ಷಗಳಿಂದ ನಾನು ಕೇಳುತ್ತಾ ಇದ್ದೇನೆ. ನೀವು ಮೀನುಗಾರರಿಗೆ ಡಿಸೇಲ್ ಸಬ್ಸಿಡಿ ಕೊಡುವುದಿಲ್ಲ. ಮೀನುಗಾರರಿಗೆ ಯಾಂತ್ರಿಕೃತ ದೋಣಿಗಳಿಗಾಗಿ ಸಹಾಯ ಮಾಡುವುದಿಲ್ಲ. ಗ್ಯಾಟ್ ಒಪ್ಪಂದದಿಂದಾಗಿ ಇವೊತ್ತು ಸಮುದ್ರದಲ್ಲಿಯೂ ಮೀನು ಸಿಗುವುದಿಲ್ಲ. ಅವರಿಗೆ ಮಾರುಕಟ್ಟೆಯ ವ್ಯವಸ್ಥೆ ಇಲ್ಲ, ಶಿಕ್ಷಣ ಬಗ್ಗೆ ಆದ್ಯತೆಯೂ ಇಲ್ಲ ಮುಂತಾದವುಗಳನ್ನು ನೀವು ಮುಂದೆ ಮಾಡಿ, ಆದರೆ ಅವರಿಗೆ ಮನೆಗಳನ್ನು ಆದ್ಯತೆಯ ಮೇಲೆ ಕೊಡಿ ಎಂದು ಕೇಳಿದರ, ಇದುವರೆವಿಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ 211 ಮನೆಗಳನ್ನು ಮಾತ್ರ ಮೀನುಗಾರಿಕೆ ಇಲಾಖೆಯಿಂದ ಕೊಟ್ಟಿದ್ದಾರೆ. ಕಳೆದ ವರ್ಷದಲ್ಲಿ ಕೇವಲ 70 ಮನೆಗಳನ್ನು ಕೊಟ್ಟಿದ್ದಾರೆ. ನೀವು ಮೊದಲು ತಾಲ್ಲೂಕು ಮಟ್ಟದಲ್ಲಿ ಇವರುಗಳಿಗೆ ಎಷ್ಟು ಮನೆಗಳ ಅಗತ್ಯತೆ ಇದೆ ಎಂಬುದನ್ನು ಪಟ್ಟಿತರಿಸಿಕೊಳ್ಳಬೇಕು. ಇದರಲ್ಲಿ ಸರಿಯಾದಂಥ ಮಾಹಿತಿಗಳ ಲಭ್ಯವಿಲ್ಲ. ಕೇವಲ 586 ಎಂದು ಇದೆ. ಜಾಸ್ತಿ ಅರ್ಜಿಗಳು ಇವೆ. ಆ ಮಾಹಿತಿಗಳನ್ನು ತರಿಸಿಕೊಳ್ಳಬೇಕು. ಎರಡನೇಯದಾಗಿ ಹುಡ್ಕೋದಿಂದ

ಪ್ರಯತ್ನ ಮಾಡುತ್ತೇವೆಂದು ಪ್ರತಿಸಲವೂ ಹೇಳುತ್ತಿದ್ದೀರಿ. ಹುಡ್ಕೋ ನೆರವಿನಿಂದ ಇಂತಿಷ್ಟು ಮನೆಗಳನ್ನು ಇಂತಿಷ್ಟು ಸಮಯದಲ್ಲಿ ಮಾಡಿಕೊಡುತ್ತೇವೆ ಎಂಬ ಸ್ಪಷ್ಟ ಉತ್ತರವನ್ನು ಈ ಸಂದರ್ಭದಲ್ಲಿ ಕೊಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿಶ್ವೇಶ್ವರ ಹೆಗಡೆಯವರಿಗೆ ಈ ಇಲಾಖೆಯಲ್ಲಿ ಆದಂಥ ಕಾರ್ಯಕ್ರಮಗಳ ಬಗ್ಗೆ ಹೆಚ್ಚು ಮಾಹಿತಿಗಳನ್ನು ತಿಳಿದುಕೊಂಡಿದ್ದರೆ ಈ ರೀತಿಯಾಗಿ ಮಾತನಾಡುತ್ತಿದ್ದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಅವರು ಮನೆಗಳ ಬಗ್ಗೆ ಕೇಳಿದ್ದಾರೆ. ರಾಜ್ಯದಲ್ಲಿ ಈಗಾಗಲೇ 2799 ಮನೆಗಳನ್ನು ಕೊಟ್ಟಿದ್ದೇವೆ. ಒಟ್ಟು 5750 ಅರ್ಜಿಗಳು ಇವೆ. ಎಲ್ಲಾ ಅರ್ಜಿಗಳಿಗೂ ಮನೆಗಳನ್ನು ಕೊಡಬೇಕೆಂದು ತೀರ್ಮಾನವನ್ನು ಮಾಡಿ ಹುಡ್ಕೋ ಅಧಿಕಾರಿಗಳನ್ನು ಕರೆದು ಚರ್ಚೆಯನ್ನು ಮಾಡಿ, ಈ ಪ್ರಸ್ತಾವವು ಮುಂದಿನ ಸಚಿವ ಸಂಪುಟದ ಮುಂದೆ ಬರುತ್ತಾ ಇದೆ. ಅದು ಬಂದ ಕೂಡಲೇ ಎಷ್ಟು ಅರ್ಜಿಗಳಿವೆ, ಅಷ್ಟಕ್ಕೂ ಮನೆಗಳನ್ನು ಕೊಡುವ ತೀರ್ಮಾನವನ್ನು ಈಗಾಗಲೇ ಮಾಡಿದ್ದೇವೆ. ರಾಜ್ಯಮಟ್ಟದಲ್ಲಿರುವ ಎಲ್ಲಾ ಅರ್ಜಿಗಳನ್ನೂ ವಿಲೇವಾರಿ ಮಾಡುವ ತೀರ್ಮಾನವನ್ನು ರಾಜ್ಯ ಸರಕಾರವು ತೆಗೆದುಕೊಳ್ಳುತ್ತದೆ. ಡೀಸೆಲ್ ಸಬ್ಸಿಡಿ ಬಗ್ಗೆ ಕೇಳಿದ್ದಾರೆ. ಡೀಸೆಲ್ ಸಬ್ಸಿಡಿಯನ್ನು ಹೆಚ್ಚು ಮಾಡುವ ತೀರ್ಮಾನವನ್ನು ರಾಜ್ಯ ಸರ್ಕಾರವು ಈಗಾಗಲೇ ತೆಗೆದುಕೊಂಡಿದೆ. ಆರ್ಥಿಕ ಇಲಾಖೆಯೊಂದಿಗೆ ಚರ್ಚೆಯನ್ನು ಮಾಡಿ ಅದನ್ನು ಹೆಚ್ಚು ಮಾಡುತ್ತಾ ಇದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ :- ಹುಡ್ಕೋ ವಿಚಾರದಲ್ಲಿ ಕಳೆದ ಮೂರು ವರ್ಷಗಳಿಂದಲೂ ಇದೇ ಉತ್ತರವನ್ನು ಕೊಡುತ್ತಾ ಇದ್ದಾರೆ. ಈಗ ಮಾನ್ಯ ಸಚಿವರು ಮುಂದಿನ ಸಚಿವ ಸಂಪುಟದಲ್ಲಿ ಎಂದು ಹೇಳಿದ್ದಾರೆ. ಆವಾಗಲಾದರೂ ಖಚಿತವಾಗಿ ಈ ನಿರ್ಣಯವಾಗಲೇಬೇಕೆಂಬ ಒತ್ತಾಯವನ್ನು ಮತ್ತೊಮ್ಮೆ ಈ ಸಂದರ್ಭದಲ್ಲಿ ಮಾಡಲಿಚ್ಛಿಸುತ್ತೇವೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ :- ಮಾನ್ಯ ಅಧ್ಯಕ್ಷರೇ, ಪ್ರಸ್ತಾವವು ಸಚಿವ ಸಂಪುಟದ ಮುಂದೆ ಬರುತ್ತಾ ಇದೆ ಅಂದರೆ, ಅದನ್ನು ನಂಬಬೇಕಾಗುತ್ತದೆ.

ಶ್ರೀ ಎನ್. ಯೋಗೀಶ್ ಭಟ್ :- ಮಾನ್ಯ ಅಧ್ಯಕ್ಷರೇ, ಕೇಂದ್ರ ಪುರಸ್ಕೃತ ಮೀನುಗಾರರ ಕಲ್ಯಾಣ ಯೋಜನೆಗೆ 1997-98ಕ್ಕೆ ರಾಜ್ಯಕ್ಕೆ ಎಷ್ಟು ಅನುದಾನ ಬಂದಿತ್ತು, ಎಷ್ಟು ಮೀನುಗಾರರ ಮನೆಗಳನ್ನು ಕಟ್ಟಬೇಕೆಂಬ ಗುರಿ ಇತ್ತು, ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ ಮತ್ತು ಎಷ್ಟು ಹಣ ಲ್ಯಾಪ್ಸ್ ಆಗಿದೆ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ :- 98-99 ಕ್ಕೆ ಹಣವನ್ನು ಬಿಡುಗಡೆ ಮಾಡಿಲ್ಲ. ಒಟ್ಟು 600 ಮನೆಗಳಿಗೆ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ ವರ್ಷಕ್ಕೆ 400-500 ಮನೆಗಳನ್ನು ಬಿಡುಗಡೆ ಮಾಡುತ್ತಾ ಹೋದರೆ 11 ಸಾವಿರ ಮನೆಗಳನ್ನು ಕೊಡಲು 11 ವರ್ಷವಾಗುತ್ತದೆ. ಇದೆಲ್ಲಕ್ಕೂ ವ್ಯವಸ್ಥೆ ಮಾಡುವುದಕ್ಕೆ ನಾವು ಹುಡ್ಕೋದಿಂದ ಸಾಲ ತೆಗೆದು ಮಾಡಬೇಕೆಂದಿದ್ದೇವೆ. ಇಲ್ಲಿ ಹಣ ಲ್ಯಾಪ್ಸ್ ಆಗುವ ಪ್ರಶ್ನೆಯೇ ಬರುವುದಿಲ್ಲ.

ಅಧ್ಯಕ್ಷರು :- ನೀವು ಮೀನು ತಿನ್ನುವುದಿಲ್ಲ, ಆದರೂ ಪ್ರಶ್ನೆ ಕೇಳುತ್ತೀರಿ.

ಡಾ: ಎಂ.ಪಿ. ಕರ್ಕಿ :- ನಾನು ಮೀನುಗಾರ ಇರಲಿಕ್ಕಿಲ್ಲ. ಆದರೆ ನನ್ನ ಕ್ಷೇತ್ರದಲ್ಲಿ ಮೀನುಗಾರರಿದ್ದಾರೆ. ನಾನು ಮೀನು ತಿನ್ನದೇ ಹೋದರೆ ಏನಾಯಿತು?

ಶ್ರೀ ವಸಂತ ವಿ. ಸಾಲಿಯಾನ :- ಮಾನ್ಯ ಮಂತ್ರಿಗಳು 5000 ಮನೆಗಳನ್ನು ಕೊಡುವುದು ಬಾಕಿ ಇದೆ ಎಂದು ಹೇಳಿದರು. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದ ಕಾರ್ಯಕ್ರಮ ಇದಾಗಿದೆ. ಕೇಂದ್ರದಿಂದ ಎಷ್ಟು ಬಂದಿದೆ ರಾಜ್ಯ ಸರಕಾರ ಅದಕ್ಕೆ 50 ಪರ್ಸೆಂಟ್ ಹಣ ಇಟ್ಟು ಕೊಂಡು 1995-96 ನೇ ಸಾಲಿಗೆ ಎಷ್ಟು ಮನೆಗಳನ್ನು ಕಟ್ಟಿಸಿದ್ದೀರಿ. 1996-97 ನೇ ಸಾಲಿಗೆ ಎಷ್ಟು ಮನೆಗಳನ್ನು ಕಟ್ಟಿಸಿದ್ದೀರಿ ಮತ್ತು 95-96ನೇ ಸಾಲಿಗೆ ಕೇಂದ್ರ ಸರಕಾರದಿಂದ ಎಷ್ಟು ಹಣ ಬಂದಿದೆ. 1996-97ನೇ ಸಾಲಿಗೆ ಎಷ್ಟು ಹಣ ಬಂದಿದೆ? ರಾಜ್ಯ ಸರಕಾರದಿಂದ ಅಷ್ಟೇ ಪಾಲಿನ ಹಣವನ್ನು ಒದಗಿಸಿ ಕೊಟ್ಟಿದ್ದೀರಾ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಈ ಕಾರ್ಯಕ್ರಮ 1987 ರಲ್ಲಿ ಪ್ರಾರಂಭವಾದದ್ದು 1987-88 ಕ್ಕೆ 100 ಮನೆಗಳನ್ನು 1989-90 ರಲ್ಲಿ 200 ಮನೆಗಳು 1990-91 ರಲ್ಲಿ 200 91-92 ರಲ್ಲಿ 100, 92-93 ರಲ್ಲಿ 158, 93-94 ರಲ್ಲಿ 279 , 94-95 ರಲ್ಲಿ 150, 95-96 ರಲ್ಲಿ 1112 ಮನೆಗಳು , 96-97 ರಲ್ಲಿ 650 ಪುನ: ಈ ಬಾರಿ ಬರುತ್ತಿದೆ. ಒಟ್ಟು 2799 ಮನೆಗಳಿಗೆ. 5756 ಮನೆಗಳಿಗೆ 18 ಕೋಟಿಯಷ್ಟು ಹಣವು ಬೇಕಾಗುತ್ತದೆ ಅದನ್ನು ಹುಡ್ಕೋದಿಂದ ಈ ಬಾರಿಯೇ ಹಣ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ವಸಂತ ವಿ. ಸಾಲಿಯಾನ :- ಮೀನುಗಾರಿಕಾ ಇಲಾಖೆಯಿಂದ ಬಡ್ಜೆಟ್ ಇರುವುದೇ 23 ಕೋಟಿ ಈ ಎಲ್ಲ ಹಣವನ್ನು ಮನೆಗಳಿಗೆ ಖರ್ಚು ಮಾಡಿದರೆ.....

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಎಲ್ಲಾ ಹಣವನ್ನು ಇದಕ್ಕೆ ಹಾಕುತ್ತಿಲ್ಲ, ಹುಡ್ಕೋದಿಂದ ಸಾಲವನ್ನು ಪಡೆದು ಮುಂದಿನ ವರ್ಷದಿಂದ ಸಾಲವನ್ನು ತೀರಿಸುತ್ತಾ ಹೋಗುತ್ತೇವೆ.

ಶ್ರೀ ವಸಂತ . ವಿ .ಸಾಲಿಯಾನ :- ನಾವು ವಿಷಯ ಸಮಿತಿಯಲ್ಲಿ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆವು. ಮೀನುಗಾರಿಕಾ ಇಲಾಖೆಗೆ ಕನಿಷ್ಠ ನೂರು ಕೋಟಿ ಯೋಜನೆ ತಯಾರು ಮಾಡಬೇಕೆಂದು ಕಳೆದ ಮೂರು ವರ್ಷಗಳಿಂದ ಹೇಳುತ್ತಿದ್ದೇವೆ. ಕಡೆ ಪಕ್ಷ 50 ಕೋಟಿ ಹಣವನ್ನಾದರೂ ಕೂಡ ನಮ್ಮ ರಾಜ್ಯ ಇಲ್ಲವೇ ಕೆಂದ್ರದಿಂದ ಹಣ ಪಡೆಯಲಿಕ್ಕಾಗಲಿಲ್ಲ. ಬೇರೆ ಬೇರೆ ರಾಜ್ಯದಲ್ಲಿ ಉದಾಹರಣೆಗೆ ಹೇಳುವುದಾದರೆ ಗುಜರಾತಿಗೆ ನಾನು ಮಂತ್ರಿಯಾಗಿ ಹೋಗಿದ್ದೆ. ಅಲ್ಲಿ ನೂರು ಕೋಟಿ ರೂಪಾಯಿಯ ಪ್ರಾಜೆಕ್ಟ್ ಈ ಮೀನುಗಾರಿಕಾ ಇಲಾಖೆಗೆ ಇದೆ. 3 ವರ್ಷದಲ್ಲಿ ತಾವು ಮಂತ್ರಿಯಾಗಿ ಒಂದು ಕೋಟಿ ಹಣವನ್ನು ಜಾಸ್ತಿ ಕೊಡುವುದಕ್ಕಾಗಲಿಲ್ಲವೆಂದು ನನಗೆ ವಿಷಾದವಾಗುತ್ತದೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ :- ನೂರು ಕೋಟಿ ರೂಪಾಯಿಯ ಹಣವನ್ನು ಮೀನುಗಾರಿಕಾ ಇಲಾಖೆಗೆ ಕೊಟ್ಟರೂ ಸಹ, ಕೇಂದ್ರದಿಂದ ಎಷ್ಟು ಹಣ ಬಿಡುಗಡೆಯಾಗುತ್ತದೆ ಅಷ್ಟು ಮ್ಯಾಚಿಂಗ್ ಗ್ರ್ಯಾಂಟ್‌ನ್ನು ಬಿಡುಗಡೆ ಮಾಡಿ ಮನೆಯನ್ನು ಪೂರ್ತಿ ಮಾಡುವುದಕ್ಕಾಗುತ್ತದೆಯೇ ಹೊರತು ಪೂರ್ತಿ ಹಣವನ್ನು ಮನೆಗೆ ಕೊಡುವುದಕ್ಕಾಗುವುದಿಲ್ಲ. ಕೇಂದ್ರದಲ್ಲಿ ಮ್ಯಾಚಿಂಗ್ ಗ್ರ್ಯಾಂಟ್ ಕಡಿಮೆ ಕೊಡುವುದರಿಂದ ಹುಡ್ಕೋದಿಂದ ಹಣ ತೆಗೆದುಕೊಂಡು ಮಾಡುತ್ತೇವೆ. ತಾವು ಮಂತ್ರಿಯಾಗಿದ್ದಾಗ ಎಷ್ಟು ಮನೆಗಳ ಬಿಡುಗಡೆಯಾಗಿದೆ ಅದನ್ನು ನೋಡಿದರೆ ಇತ್ತೀಚೆಗೆ ನಾವು ಹೆಚ್ಚು ಹಣ ಇಟ್ಟು ಮನೆಗಳನ್ನು ಬಿಡುಗಡೆ ಮಾಡುತ್ತಿದ್ದೇವೆ

ಡಾ. ಎಂ. ಪಿ. ಕರ್ಕಿ:- ಗ್ರೂಪ್ ಹೌಸಿಂಗ್ ಸ್ಕೀಮಿನಲ್ಲಿ ಪ್ರತಿ ಮನೆಗೆ 35000 ಹಣ ಕೊಡುತ್ತಾರೆಂದು ಕೇಳಿದ್ದೆ. ಆದರೆ ಪ್ರಸಕ್ತ 30,000 ರೂಪಾಯಿ ಹಣ ಮಾತ್ರ ಬಿಡುಗಡೆಯಾಗುತ್ತಿದೆ ಇದು ಏಕೆ ಎಂದು ಕೇಳುತ್ತಿದ್ದೇನೆ. ಗ್ರೂಪ್ ಹೌಸಿಂಗ್ ಸ್ಕೀಮಿನಲ್ಲಿ 10 ಮನೆಗಳ ಒಂದು ಗುಂಪಿಗೆ ಸಮುದಾಯ ಭವನ

ಒಂದು ಬಾವಿ ಕಟ್ಟಿಕೊಡಬೇಕೆಂದು ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಇದೆ. ಈ ಸಮುದಾಯ ಭವನ ಹಾಗೂ ಬಾವಿ ಕಟ್ಟಿಕೊಡುವುದಕ್ಕೆ ಕಾರ್ಯಕ್ರಮವನ್ನು ತಾವು ಕಾರ್ಯರೂಪಕ್ಕೆ ತಂದಿದ್ದೀರಾ?

ಶ್ರೀ ಕೆ. ಜಯಪ್ರಕಾಶ ಹೆಗಡೆ :- 30 ರಿಂದ 35 ಸಾವಿರ ರೂಪಾಯಿ ಕೊಡಬೇಕೆಂದು ಇದೆ. ಹೆಚ್ಚು ಮನೆಗಳನ್ನು ಕೊಡುವ ದೃಷ್ಟಿಯಿಂದ 35000 ರೂಪಾಯಿಗಳನ್ನು ಎಲ್ಲಾ ಕಡೆಗೆ ಹಂಚುತ್ತಿದ್ದೇವೆ. 10 ಮನೆಗಳಲ್ಲಿ ಒಂದು ಬೋರ್‌ವೆಲ್ ಹಾಕಬೇಕೆಂದು ಇದೆ. ಎಲ್ಲೆಲ್ಲಿ ಬೇಡಿಕೆ ಇದೆ ಅಲ್ಲಿಗೆ ಬೋರ್‌ವೆಲ್ ಕೊಡುತ್ತಿದ್ದೇವೆ. ಮಿನಿಮಮ್ 75 ಮನೆಗಳು ಇದ್ದರೆ ಅಲ್ಲಿಗೆ ಸಮುದಾಯ ಭವನ ಕೊಡಬೇಕೆಂದು ಇದೆ. ಆ ರೀತಿ ಎಲ್ಲಿಯಾದರೂ 75- 100 ಗ್ರೂಪ್ ಹೌಸಸ್ ಸಿಕ್ಕಿದರೆ ನಾವು ಬೇಡಿಕೆ ಇದ್ದಲ್ಲೆಲ್ಲಾ ಸಮುದಾಯ ಭವನ ಕೊಡುತ್ತೇವೆ. ಎಲ್ಲೆಲ್ಲಿ 75 ರಿಂದ 100 ಮನೆಗಳಿವೆ ಅಲ್ಲಿ ಸಮುದಾಯ ಭವನ ಕೊಡಬೇಕೆಂದು ತೀರ್ಮಾನ ಮಾಡಿದ್ದು ನಾನು ಅಧಿಕಾರಿಗಳಿಗೆ ತಿಳಿಸಿದ್ದೇನೆ.

ಶ್ರೀ ಸಯ್ಯದ್ ಜುಲ್ಫಿಕರ್ ಹುಷ್ಣಿ :- ನನ್ನ ಕ್ಷೇತ್ರದಲ್ಲಿ ಒಂದೂವರೆ ಲಕ್ಷ ಮೀನುಗಾರರು ಇದ್ದಾರೆ. ಒಂದು ಮನೆ ಕೊಟ್ಟಿಲ್ಲ. ಡಾಕ್ಯುಮೆಂಟ್ಸ್ ತಂದು ಕೊಟ್ಟಿದ್ದೇವೆ. 3 ವರ್ಷದಿಂದ ಒಂದು ಮನೆ ಕೊಟ್ಟಿಲ್ಲ. ಲ್ಯಾಂಡ್ ಅನ್ನು ಓನ ಆಗಿ ಪರ್ಚೇಸ್ ಮಾಡಿಕೊಡುತ್ತಿದ್ದೇನೆ. ಈ ವರ್ಷ ಕೊಡುತ್ತೀರೋ ಇಲ್ಲವೋ ತಿಳಿಸಿ.

ಶ್ರೀ ಕೆ. ಜಯಪ್ರಕಾಶ ಹೆಗಡೆ :- ಈ ಬಾರಿ ಬಿಡುಗಡೆ ಮಾಡುವಾಗ ತಮಗೆ ಕೊಡುತ್ತೇನೆ.

ನಂಜನ ಗೂಡಿನಿಂದ ಪುಣಜನೂರಿನ ರಸ್ತೆ ದುರಸ್ತಿ

83 (444) ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾಗೂ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ವಿಸ್ತೀರ್ಣ ಎಷ್ಟು ?

ಆ) ರಾಜ್ಯಾದ್ಯಾಂತ ರಸ್ತೆಗಳು ಹದಗೆಟ್ಟಿರುವುದು ಹಾಗೂ ನಂಜನಗೂಡಿನಿಂದ - ಪುಣ ಜನೂರಿನವರೆಗೆ ಬಹಳ ವರ್ಷಗಳಿಂದ ರಸ್ತೆಗಳು ತೀವ್ರ ಹದಗೆಟ್ಟಿ ಅದನ್ನು ದುರಸ್ತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಅದನ್ನು ಯಾವಾಗ ದುರಸ್ತಿ ಮಾಡಲಾಗುವುದು?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಯು ಒಟ್ಟು ಉದ್ದ 2293 ಕಿ.ಮೀ. ಲೋಕೋಪಯೋಗಿ ಇಲಾಖೆಗೆ ಸೇರಿಸಿದೆ ಇತರೆ ರಸ್ತೆಗಳ ಉದ್ದ 89,756 ಕಿ.ಮೀ.

ಆ) ರಾಷ್ಟ್ರೀಯ ಹೆದ್ದಾರಿ ವಲಯದಿಂದ ರಾಜ್ಯ ಹೆದ್ದಾರಿ ಕರ್ನಾಟಕದ ನಂಜನಗೂಡನ್ನು ತಮಿಳುನಾಡಿನ ಕೊಯಮತ್ತೂರಿನೊಂದಿಗೆ ಸಂಪರ್ಕಿಸುವ ರಸ್ತೆಯ ಆಯ್ದ ಭಾಗಗಳನ್ನು ಅಭಿವೃದ್ಧಿಪಡಿಸಲು (27.83 ಕಿ.ಮೀ) ನ್ನು ಕೇಂದ್ರ ಸಾರಿಗೆ ಸಚಿವಾಲಯದಿಂದ ಅನುಮತಿ ದೊರಕಿದ್ದು 239.85 ಲಕ್ಷ ಅಂದಾಜಿನಲ್ಲಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.